# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 05(ಜಕ್ಕೂರು)
## ವಾರ್ಡ್‌ಸಮಿತಿ ಸಭೆ, ದಿನಾಂಕ: 07.06.2021 ರ
## ಸಭಾ ನಡುವಳಿ

ದಿನಾಂಕ: 07.06.2021 ರಂದು ಬೆಳ್ಳಿಗೆ 11.30 ಗಂಟೆಗೆ ವಾರ್ಡ್ ನಂ.05 ಜಕ್ಕೂರು ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪ ವಿಭಾಗ ಕಛೇರಿ, ದಾಸರಹಳ್ಳಿ, ಇಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಜಿ ದೇವರಾಜ್ | ನೋಡಲ್ ಅಧಿಕಾರಿ, ವಾರ್ಡ್ ನಂ. 05(ಜಕ್ಕೂರು) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ) |
| 2 | ವೈ.ಎನ್ ಮಹಂತೇಶ್ ಕುಮಾರ್ | ಕಾರ್ಯದರ್ಶಿಗಳು, ವಾರ್ಡ್ ಕಮಿಟಿ ವಾರ್ಡ್ ನಂ. 06 , ಮತ್ತು ಸಹಾಯಕ ಅಭಿಯಂತರರು |
| 3 | ಮಹದೇವಪ್ಪ | ರೆವಿನ್ಯೂ ಇನ್ಸ್‌ಪೆಕ್ಟರ್ ವಾರ್ಡ್ ನಂ. 05 |
| 4 | ಸೋಮಶೇಖರ್ | ವ್ಯವಸ್ಥಾಪಕರು, ಸ.ಕಂ.ಅ ಬ್ಯಾ.ಉ.ವಿ |
| 5 | ಶ್ರೀ ಜಿ. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 05 |
| 6 | ಶ್ರೀ ಅಶ್ವಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 05 |
| 7 | ಬಿ. ನಾಗೇಂದ್ರಪ್ಪ | ಎಸ್.ಡಿ.ಎ, ಕಂದಾಯ ಶಾಖೆ, ಥಣಿಸಂದ್ರ |

ಶ್ರೀ ವೈ.ಎನ್ ಮಹಂತೇಶ್ ಕುಮಾರ್ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಈ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮುಖ ವಿಷಯಗಳ ಬಗ್ಗೆ ವಿವರಿಸುತ್ತಾ ಸದರಿ ಸಭೆಯ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್–19ರ ಸಂಬಂಧ ಮುಜಾಗೃತ ಕ್ರಮಗಳ ಬಗ್ಗೆ**. ವಾರ್ಡ್ ಸ.ಅ ರವರು ಮಾತನಾಡಿ ಬೆಂಗಳೂರು ನಗರದಲ್ಲಿ ದಿನೇ ದಿನೇ ಸೋಂಕು ಕಡಿಮೆಯಾಗುತ್ತಿದ್ದು, 18 ರಿಂದ 44 ವರ್ಷದ ಹಾಗೂ 45 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರು ಮುಜಾಗ್ರತ ಕ್ರಮವಾಗಿ ಲಸಿಕೆ ಹಾಕಿಸಿಕೊಳ್ಳುವಂತೆ ಅರಿವು ಮೂಡಿಸಲು ಕ್ರಮವಹಿಸಬೇಕಾಗಿರುತ್ತದೆ. ಅದುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಆಟೋಗಳ ಮೂಲಕ ಸಾರ್ವಜನಿಕರಲ್ಲಿ ಲಸಿಕೆ ಹಾಕಿಸಿಕೊಳ್ಳುವಂತೆ ಪ್ರಚಾರ ಮಾಡುವಂತೆ ಕ್ರಮ ವಹಿಸಲು ಆರೋಗ್ಯ ಪರಿವೀಕ್ಷಕರು ಕ್ರಮ ವಹಿಸುವಂಥೆ ಕೋರಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಸೊಂಕು ನಿವಾರಕವನ್ನು ಸಿಂಪಡಿಸಲು ಸಾರ್ವಜನಿಕರು ಕೋರಿರುವುದರಿಂದ ಸ.ಅ ರವರು ಕ್ರಮ ವಹಿಸುವಂಥೆ ಮಾನ್ಯ ಅಧ್ಯಕ್ಷರು ರವರು ಸೂಚಿಸಿದರು.



Scanned by CamScanner

2. ಶ್ರೀ ಅಶ್ವಥ್ ಅ.ಪ ರವರು ಮಾತನಾಡಿ ಹೆಚ್ಚುವರಿ ಘನತ್ಯಾಜ್ಯ ನಿರ್ವಹಣೆಗಾಗಿ ಬ್ಲಾಕ್ ಸ್ಪಾಟ್ ಸ್ಥಳಗಳನ್ನು ಸೌಂದರೀಕರಣ ಗೊಳಿಸಲು ಸಾಮಗ್ರಿಗಳನ್ನು ಒದಗಿಸುವಂತೆ ಸ.ಕಾ.ಅ ಘನತ್ಯಾಜ್ಯ ರವರಿಗೆ ಕೋರಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಣಕಸ ವಿಲೇವಾರಿಗಾಗಿ 3 ಆಟೋ ಟಿಪ್ಪರ್‌ಗಳನ್ನು ಒದಗಿಸುವಂತೆ ಸ.ಕಾ.ಅ ಘನತ್ಯಾಜ್ಯ ರವರಿಗೆ ತಿಳಿಸಲಾಗಿರುತ್ತದೆ ಎಂದು ತಿಳಿಸಿದರು.
3. ಸಾರ್ವಜನಿಕರು ಮಾತನಾಡಿ ಟೆಲಿಕಾಂ ಬಡಾವಣೆಯ ರೈಲ್ವೆ ಸೇತುವೆ ಕೆಳಗೆ ಸಂಪರ್ಕ ಚರಂಡಿಯನ್ನು ನಿರ್ಮಿಸಲು ಕೋರಿರುತ್ತಾರೆ.
4. ರಾಜೇಂದ್ರ ಹೆಗ್ಗಡೆ ಟೆಲಿಕಾಂ ಬಡಾವಣೆ ರವರು ಮಾತನಾಡಿ ಟೆಲಿಕಾಂ ಬಡಾವಣೆ 1ನೇ ಅಡ್ಡರಸ್ತೆಯಲ್ಲಿ ರಾಜಕಾಲುವೆಯನ್ನು ಸ್ವಚ್ಚಗೊಳಿಸುವಂಥೆ ಕೋರಿದರು ಈ ಬಗ್ಗೆ ಸ.ಅ ರವರು ಮಾತನಾಡಿ ಸಂಬಂಧಪಟ್ಟ ರಾಜಕಾಲುವೆ ವಿಭಾಗಕ್ಕೆ ಕೋರಲಾಗುವುದು ಎಂದು ಸಭೆಗೆ ತಿಳಿಸಿದರು.
5. ಸ.ಅ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದ್ದು, ಮಳೆ, ತುರ್ತು ಸಂಬಂಧ ಪರಿಸ್ಥಿತಿಯನ್ನು ತಿಳಿಗೊಳಿಸಲು ಮುನ್ನೆಚ್ಚರಿಕೆ ಕ್ರಮವಾಗಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿರುತ್ತದೆಂದು ಸಭೆಗೆ ತಿಳಿಸಿದರು.
6. ಬಿ.ಡಬ್ಲ್ಯೂ.ಎಸ್.ಎಸ್.ಬಿ ಮ್ಯಾನ್ ಹೋಲ್‌ಗಳು ಕೋಗಿಲು ಕೆರೆ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಮ್ಯಾನ್‌ಹೋಲ್‌ಗಳನ್ನು ಎತ್ತರಿಸಲು ಸಾರ್ವಜನಿಕರ ಕೋರಿರುತ್ತಾರೆ ಸದರಿ ವಿಷಯವನ್ನು ತುರ್ತಾಗಿ ಪರಿಗಣಿಸಿ ಕ್ರಮ ವಹಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಯವರಿಗೆ ತಿಳಿಸಲಾಯಿತು.
7. ಬೀದಿ ದೀಪ ನಿರ್ವಹಣೆಯ ಬಗ್ಗೆ ಸಾರ್ವಜನಿಕರಿಂದ ಹಲವಾರು ದೂರುಗಳು ಬರುತ್ತಿದ್ದು, ಈ ಬಗ್ಗೆ ಬಿಬಿಎಂಪಿ ವಿದ್ಯುತ್ ವಿಭಾಗದ ಅಧಿಕಾರಿಗಳಿಗೆ ಕ್ರಮ ವಹಿಸುವಂಥೆ ಸೂಚಿಸಲಾಯಿತು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು ಹಾಗೂ ಕೋವಿಡ್-19ರ ಸಂಬಂಧ ಮೇಲಾಧಿಕಾರಿಗಳಿಂದ ಬರುವ ಸೂಚನೆ ಮತ್ತು ಆದೇಶಗಳನ್ನು ನಿಯಮಾಸುಸಾರ ಪಾಲಿಸುವಂಥೆ ಹಾಗೂ ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸೂಚಿಸುತ್ತಾ ಮುಂದಿನ ಸಭೆಗೆ ಸಂಬಧಪಟ್ಟ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರುವಂಥೆ ಕ್ರಮ ವಹಿಸಲು ಕಾರ್ಯದರ್ಶಿಯವರಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 05(ಜಕ್ಕೂರು)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 05, (ಜಕ್ಕೂರು)
7/06/21

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.



Scanned by CamScanner